




**ಮಾನ್ವಿತಾ ಆರ್.**
4ನೇ ತರಗತಿ, ಲಿಟಲ್ ಫ್ಲವರ್ ಪಬ್ಲಿಕ್ ಸ್ಕೂಲ್






**ಸ್ವರಾ ಶ್ರೀನಿವಾಸ**
5ನೇ ತರಗತಿ, ಇನ್‌ಸೈಟ್ ಅಕಾಡೆಮಿ
ಬೆಂಗಳೂರು

ಎಳೆಯರು ಬಿಡಿಸಿದ ವರ್ಣಚಿತ್ರ, ರೇಖಾಚಿತ್ರ, ವರ್ಣಚಿತ್ರಗಳನ್ನು ಅವರ ತರಗತಿ, ಶಾಲೆಯ ವಿವರ ಮತ್ತು ಭಾವಚಿತ್ರವನ್ನು ಲಗತ್ತಿಸಿ 'ಕುಂಚ ಪ್ರಪಂಚ' ವಿಭಾಗಕ್ಕೆ ಕಳಿಸಿಕೊಡಿ.
**ವಿಳಾಸ:** editorsu@sudha.co.in

# ಅಪ್ಪಿಯ ಗಿಳಿ ಮರಿ

■ **ಬೀರಣ್ಣ ನಾಯಕ ಮೊಗಟಾ**
ಕಲೆ: ಸಂತೋಷ್ ಸಸಿಹಿತ್ಲು

ಬಾಳೆಯ ಗಿಡದಾ ಹೂವಿನ ಹತ್ತಿರ
ಗಿಳಿ ಮರಿ ಬಂದಿತ್ತು
ಆಟವಾಡುವ ಅಪ್ಪಿಯು ನೋಡಿ
ಹತ್ತಿರ ಸೆಳೆದಿತ್ತು
ಹಸಿರು ಕೆಂಪಿನ ಬಣ್ಣದ ಗಿಳಿಯು
ಮಾತದು ಮುತ್ತಂತೆ
ಅಪ್ಪಿಯು ಕರೆಗೆ ನೋಡುತಲಿತ್ತು
ಮಾತಿಗೆ ಇಳಿದಂತೆ

ನಿನಗಿದೆ ರೆಕ್ಕೆ, ಮುಖದಲಿ ಕೊಕ್ಕು
ನನಗೇಕದು ಇಲ್ಲಾ
ಹಸಿರಿನ ಗರಿಯೂ, ಕೆಂಪನೆ ಕೊಕ್ಕು
ನನಗೂ ಬೇಕಲ್ಲಾ!
ಚೆಂದದಿ ಬಾನಿಗೆ ಹಾರುವೆ ನೀನು
ನನಗೂ ಆಸೆ ಗಿಳಿ ಮರಿಯೆ
ಮಾಗಿದ ಹಣ್ಣನು ಮೆಲ್ಲುವೆ ನೀನು
ನಿನ್ನೆಯ ಗರಿಮೆ ನಾನರಿಯೆ!

ನಿನಗಿದೆ ತೋಳು, ಚೆಂದದ ಬಟ್ಟೆ
ಅದುವೇ ನನಗಿಲ್ಲಾ
ಚಲಿಸಲು ಕಾರು, ಕಲಿಯಲು ಶಾಲೆ
ಅವುಗಳು ನಿನಗೆಲ್ಲಾ
ನಾನದು ಪಕ್ಷಿ, ನೀನದು ಹುಡುಗಿ
ದೇವರ ಸೃಷ್ಟಿಯೇ ಭಿನ್ನ
ನನ್ನೆಯ ಬದುಕು, ನಿನ್ನೆಯ ಬಾಳು
ಕೂಡಿ ಬಾಳಿದರೆ ಚೆನ್ನ ■

